# ಸಾರ್ವಜನಿಕ ಆಸ್ಪತ್ರೆಯಲ್ಲಿ 60 ಹಾಸಿಗೆಯ ತಾಯಿ ಮತ್ತು ಮಕ್ಕಳ ಆಸ್ಪತ್ರಯ ಸೇವೆಗೆ ಶಾಸಕ ವಿಶ್ವಾಸ್ ವೈದ್ಯ ಚಾಲನೆ



ಸವದತ್ತಿ : ಸ್ಥಳಿಯ ಸಾರ್ವಜನಿಕ ಆಸ್ಪೆತ್ರೆಯ ಆವರಣದಲ್ಲಿ ನೂತವಾಗಿ ನಿರ್ಮಿಸಿದ 60 ಹಾಸಿಗೆಯಯ ತಾಯಿ ಮತ್ತು ಮಕ್ಕಳ ಸೇವೆಗೆ ಶಾಸಕರ ವಿಶ್ವಾಸ ವೈದ್ಯೆ ಚಾಲನೆ ನೀಡಿದರು.
ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ ಶಾಸಕ ವಿಶ್ವಾಸ ವೈದ್ಯ ಕ್ಷೇತ್ರದ ಜನರಿಗೆ ಈ ಆಸ್ಪತ್ರೆಯಿಂದ ಅನುಕೂಲ ಆಗಲಿದೆ. ತಾಲೂಕಿನಲ್ಲಿ ಅಭಿವೃದ್ಧಿ ಪತದತ್ತ ಸಾಗಿದೆ. 60 ಬೆಡ್, ತಾಯಿ ಮಕ್ಕಳ ಆಸ್ಪತ್ರೆ ಜಿಲ್ಲೆಯಲ್ಲಿ ಇದೇ ಮೊದಲು. ಹೆಚ್ಚು ಹೆಚ್ಚು ಆಸ್ಪತ್ರೆ ಮೇಲ್ದರ್ಜೆಗೆರಿಸುವ ಗುರಿಇದೆ. ತಾಯಿ ಹಾಗೂ ಮಕ್ಕಳಲ್ಲಿ ಪೌಷ್ಟಿಕ ಆಹಾರದ ಕೊರತೆ ಕಾಣುತ್ತಿದ್ದು, ಪೌಷ್ಟಿಕ ಆಹಾರಕ್ಕಾಗಿ ವಿಶೇಷ ಅನುದಾನವನ್ನು ನೀಡುವುದರ ಮೂಲಕ ಆರೋಗ್ಯಕ್ಕೆ ನಮ್ಮ ಸರಕಾರ ಹೆಚ್ಚು ಒತ್ತು ನೀಡಿದ್ದೇವೆ ಎಂದರು.

ಈ ವೇಳೆ ತಹಶೀಲ್ದಾರ ಎಮ್.ಆರ್. ಕುಲಕರ್ಣಿ, ಪುರಸಭೆ ಮುಖ್ಯಾಧಿಕಾರಿ ಸಂಗನಬಸಯ್ಯ ಗದಗಿಮಠ, ತಾಲೂಕು ವೈಧ್ಯಾಧಿಕಾರಿ ಡಾ. ಶ್ರೀಪಾಧ ಸಬ್ನಿಸ್, ಮುಖ್ಯ ವೈಧ್ಯಾಧಿಕಾರಿ ಡಾ. ಎಚ್. ಎಮ್. ಮಲ್ಲನಗೌಡ, ವೈಧ್ಯರಾದ ಡಾ. ಪಿ. ವಿ. ಕಾಡರಕೊಪ್ಪ, ಡಾ. ಎಸ್. ಬಿ. ಹಿತ್ತಲಮನಿ, ಡಾ. ಕವಿತಾ ಎಚ್. ವಿ., ಡಾ. ರೀಜವಾನ ದೇಸಾಯಿ, ಡಾ. ವೀಣಾ ಇಟ್ನಾಳಮಠ, ಡಾ. ಪಿ. ಯು. ರಜಪೂತ, ಡಾ. ಸಂತೋಷ ತಳವಾರ, ಡಾ. ಮಂಜುನಾಥ ಬಾರಕೇರ ಮಲ್ಲಿಕಾರ್ಜುನ ಪುರದಗುಡಿ, ಶಿವಾನಂದ ಪಟ್ಟಣಶೆಟ್ಟಿ ಹಾಗೂ ಪ್ರಮುಖರು ಇದ್ದರು.

# ರಾಮಾಪೂರ ಸೈಟಿನಲ್ಲಿರುವ ವಾಲ್ಮೀಕಿ ಭವನದಲ್ಲಿ ಯಲ್ಲಮ್ಮ ಪುರಸಭೆಯಿಂದ ಸೋಮವಾರ ಸಾರ್ವಜನಿಕರ ಕುಂದು ಕೊರತೆ ಹಾಗೂ ವಾರ್ಡ ಸಭೆಯನ್ನು ಶಾಸಕ ವಿಶ್ವಾಸ್ ವೈದ್ಯ ಉದ್ಘಾಟಿಸಿದರು.



ಸವದತ್ತಿ–: 'ನಮ್ಮ ಸೇವೆ ನಿಮ್ಮ ಮನೆ ಬಾಗಿಲಿಗೆ' ಎಂಬ ವಿನೂತನ ಕಾರ್ಯಕ್ರಮದ ಮೂಲಕ ಸಾರ್ವಜನಿಕರ ಪತ್ರ ವ್ಯವಹಾರ ಸಲೀಸಾಗಿ ನಡೆಸಲು ಪುರಸಭೆ ಮುಂದಾಗಿದ್ದು ಶ್ಲಾಘ ನೀಯ ಎಂದು ಶಾಸಕ ವಿಶ್ವಾಸ್ ವೈದ್ಯ ಹೇಳಿದರು.
ಇಲ್ಲಿನ ರಾಮಾಪೂರ ಸೈಟಿನಲ್ಲಿರುವ ವಾಲ್ಮೀಕಿ ಭವನದಲ್ಲಿ ಯಲ್ಲಮ್ಮ ಪುರಸಭೆಯಿಂದ ಸೋಮವಾರ ಸಾರ್ವಜನಿಕರ ಕುಂದು ಕೊರತೆ ಹಾಗೂ ವಾರ್ಡ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪುರಸಭೆಯಿಂದ ಸಮರ್ಪಕವಾಗಿ ಜರುಗದ ಕಟ್ಟಡ ಪ್ರಮಾಣ ಪತ್ರ, ಫಹಣಿ, ವ್ಯಾಪಾರಿ ಪರವಾಣಿಗೆ ಸೇರಿ ಇತರ ಪತ್ರ ವ್ಯವಹಾರದಲ್ಲಿ ವಿಳಂಬವಾಗುತ್ತಿತ್ತು. ತಾಂತ್ರಿಕ ಸಮಸ್ಯೆ ಪರಿಹಾರಕ್ಕೆ ಜನರು ಇರುವಲ್ಲಿಗೆ ತೆರಳಿ ಸೇವೆ ನೀಡುವ ಯೋಜನೆಯ ಮೂಲಕ ತ್ವರಿತ ಮತ್ತು ಶಾಶ್ವತ ಪರಿಹಾರ ದೊರಕಿಸಿಕೊಡುವ ಕಾರ್ಯ ಯಶಸ್ವಿಯಾಗಿ ನಡೆಯಲಿ.

ಎಪಿಎಮ್‌ಸಿ ವೃತ್ತ, ಲಿಂಗರಾಜ್ ವೃತ್ತ, ಬಸ್ ನಿಲ್ದಾಣ, ಎಸ್‌ಎಲ್‌ಎಒ ಕ್ರಾಸ್ ಸೇರಿ ಪ್ರಮುಖ ವೃತ್ತಗಳಲ್ಲಿ ದೀಪಗಳ ಅಳವಡಿಕೆಗೆ 3 ಕೋಟಿ ಅನುದಾನ ಮಂಜೂರಾಗಿದೆ. ಬಸವೇಶ್ವರ ವೃತ್ತ ಮತ್ತು ಎಸ್‌ಎಲ್‌ಎಒ ಕ್ರಾಸ್‌ಗಳ ಅಭಿವೃದ್ಧಿಗೆ ಆಡಳಿತ ಅನುಮೋದನೆ ಸಿಕ್ಕಿದ್ದು, ತಲಾ 3 ಕೋಟಿ ಅನುದಾನ ಮೀಸಲಿರಿಸಲಾಗಿದೆ. ಎಪಿಎಮ್ಸಿಯ ಸ್ಮಶಾನದಿಂದ ಜಾಕ್ವೆಲ್, ಕೆಂಚಲಾರಕೊಪ್ಪದ ಮಾರ್ಗದಲ್ಲಿ 8 ಕೋಟಿ ವೆಚ್ಚದಲ್ಲಿ ವಾಕಿಂಗ್ ಸ್ಟ್ರೀಟ್ ನಿರ್ಮಿಸಲಾಗಿದೆ ಎಂದರು.

ಬೀದಿ ದೀಪ, ಶೌಚಾಲಯ, ನೀರಿನ ಸಮಸ್ಯೆ, ಚರಂಡಿ, ಮೊಬೈಲ್ ಟಾಯಲೆಟ್, ವ್ಯಾಪಾರಿಗಳು ಸಮಸ್ಯೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಈ ವೇಳೆ ತಹಶೀಲ್ದಾರ ಎಮ್.ಆರ್. ಕುಲಕರ್ಣಿ, ಪುರಸಭೆ ಮುಖ್ಯಾಧಿಕಾರಿ ಸಂಗನಬಸಯ್ಯ ಗದಗಿಮಠ, ಮಲ್ಲಿಕಾರ್ಜುನ ಪುರದಗುಡಿ, ಶಿವಾನಂದ ಪಟ್ಟಣಶೆಟ್ಟಿ ಹಾಗೂ ಪ್ರಮುಖರು ಇದ್ದರು.

# ಬಳ್ಳಾರಿ ಜಿಲ್ಲೆಗೆ ನೂತನ ಜಂಟಿ ಕೃಷಿ ನಿರ್ದೇಶಕರಾಗಿ ತಿರುಮಲೇಶ್ ಬಳ್ಳಾರಿ ಅಗ್ರಿ ಎಂಪ್ಲಾಯೀಸ್ ಅಸೋಸಿಯೇಷನ್ ಅವರಿಂದ ಅಭಿನಂದನೆ



ಬಳ್ಳಾರಿ ಮಾ –: ಬಳ್ಳಾರಿ ಜಿಲ್ಲೆಗೆ ನೂತನ ಜಂಟಿ ಕೃಷಿ ನಿರ್ದೇಶಕರಾಗಿ ಆಗಮಿಸಿದ ತಿರುಮಲೇಶ್ ಅವರಿಗೆ ಬಳ್ಳಾರಿ ಅಗ್ರಿ ಎಂಪ್ಲಾಯೀಸ್ ಅಸೋಸಿಯೇಷನ್ ವತಿಯಿಂದ ಹೃತ್ಪೂರ್ವಕವಾಗಿ ಗೌರವಿಸಿ ಅಭಿನಂದನೆಗಳನ್ನು ಸಲ್ಲಿಸಿ ಸನ್ಮಾನಿಸಿದರು. ಈ ಹಿಂದೆ ಬಳ್ಳಾರಿಯ ಜಂಟಿ ಕೃಷಿ ನಿರ್ದೇಶಕರಾಗಿದ್ದ ಮಲ್ಲಿಕಾರ್ಜುನ ಅವರು ಮುನಿರಾಬಾದ್‌ಗೆ ವರ್ಗಾವಣೆಯಾಗಿದ್ದಾರೆ. ಈ ಸ್ಥಳಕ್ಕೆ ಚಿಕ್ಕಮಂಗಳೂರಿನ ತಿರುಮಲೇಶ್ ಅವರನ್ನು ವರ್ಗಾಯಿಸಿ ಸರ್ಕಾರ ಆದೇಶ ಹೊರಡಿಸಿದೆ. ತಿರುಮಲೇಶ್ ಅವರು ಸೋಮವಾರದಿನದಂದು ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಈ ಸಂಧರ್ಬದಲ್ಲಿ ಬಳ್ಳಾರಿ ಅಗ್ರಿ ಎಂಪ್ಲಾಯೀಸ್ ಅಸೋಸಿಯೇಷನ್‌ನ ಪಧಾದಿಕಾರಿಗಳು,ಸದಸ್ಯರಾದ ಕೆ.ಟಿ.ಚೌವ್ಹಾನ್, ಧನಂಜಯ, ಬಸವರಾಜು,ಮೋಹನ್,ರಾಜು,ವೆಂಕಟೇಶ್,ನಾಗರಾಜ್,ಗಣೇಶ್ ಮತ್ತಿತರರು ಉಪಸ್ಥಿತರಿದ್ದರು.

# ಬಳ್ಳಾರಿಯಲ್ಲಿ ಬಿಜೆಪಿ ಪರಿಶಿಷ್ಟ ಪಂಗಡಗಳ ಮುನ್ನಡೆ ಸಮಾವೇಶ



ಬಳ್ಳಾರಿ ಮಾ –: ಬಳ್ಳಾರಿ ನಗರದ ಬಸವ ಭವನದಲ್ಲಿ ಅನಿಲ್ ಕುಮಾರ್ ಮೋಕಾ ಬಿಜೆಪಿ ಜಿಲ್ಲಾಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಬಿಜೆಪಿ ಪರಿಶಿಷ್ಟ ಪಂಗಡಗಳ ಮುನ್ನಡೆ ಸಮಾವೇಶ ನಡೆಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರು ಅನಿಲ ಕುಮಾರ್ ಮೋಕಾ, ದೇವೇಂದ್ರಪ್ಪ ಸಂಸದರು ಬಳ್ಳಾರಿ–ವಿಜಯನಗರ ಜಿಲ್ಲೆ,ವೈ ಎಂ ಸತೀಶ್ ವಿಧಾನಪರಿಷತ್ ಸದಸ್ಯರು ಬಳ್ಳಾರಿ–ವಿಜಯನಗರ ಜಿಲ್ಲೆ, ಶ್ರೀಮತಿ ಹೇಮಲತಾ ನಾಯಕ ವಿಧಾನ ಪರಿಷತ್ ಸದಸ್ಯರು ಕೊಪ್ಪಳ ಜಿಲ್ಲೆ , ಚಂದ್ರಶೇಖರ್ ಹಲಗೇರಿ ಸಂಘಟನಾ ಪ್ರಭಾರಿಗಳು, ಬಿ. ಶ್ರೀರಾಮುಲು ಮಾಜಿ ಸಚಿವರು, ರಾಜ್ಯ ಎಸ್.ಟಿ ಮೋರ್ಚಾ ರಾಜ್ಯಾಧ್ಯಕ್ಷರು ಬಂಗಾರ ಹನುಮಂತ, ರಾಜ್ಯ ಎಸ್. ಟಿ ಮೋರ್ಚಾ ಉಪಾಧ್ಯಕ್ಷರು ಓಬಳೇಶ್, ರಾಜ್ಯ ಎಸ್ ಟಿ ಮೋರ್ಚಾ ಕಾರ್ಯದರ್ಶಿ ಅಯ್ಯಪ್ಪ ಮೇಕಲ,ರಾಜ್ಯ ಎಸ್ ಟಿ ಮೋರ್ಚಾ ಕಾರ್ಯಕಾರಿಣಿ ಸದಸ್ಯರು ಶ್ರೀಮತಿ ವಿಜಯ ಲಕ್ಷ್ಮಿ ,ನಿಕಟಪೂರ್ವ ಜಿಲ್ಲಾಧ್ಯಕ್ಷರು ಮುರಹರಿಗೌಡ, ಡಾ॥ ಮಹಿಪಾಲ್ ಬಿಜೆಪಿ ಹಿರಿಯ ಮುಖಂಡರು, ಜಿಲ್ಲಾ ಎಸ್ ಟಿ ಮೋರ್ಚಾ ಜಿಲ್ಲಾಧ್ಯಕ್ಷರು ಎನ್. ರಾಮಕೃಷ್ಣ ಬಳ್ಳಾರಿ ನಗರ ಸಭೆ ಸದಸ್ಯರು ಹನುಮಂತ, ಯುವ ಮೋರ್ಚಾ ಜಿಲ್ಲಾಧ್ಯಕ್ಷರು ಎಂ.ಎಸ್. ಸಿದ್ದಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸೋಮಶೇಖರ್ ಗೌಡ , ಉಡೇದ ಸುರೇಶ ಹಾಗೂ ರಾಜ್ಯ ಪದಾಧಿಕಾರಿಗಳು, ಜಿಲ್ಲಾ ಪದಾಧಿಕಾರಿಗಳು,ಮಂಡಲ ಅಧ್ಯಕ್ಷರು,ಮಂಡಲ ಮೋರ್ಚಾ ಅಧ್ಯಕ್ಷರು,ಪ್ರಧಾನ ಕಾರ್ಯದರ್ಶಿಗಳು,ಪದಾಧಿಕಾ ರಿಗಳು, ಸೋಷಿಯಲ್ ಮೀಡಿಯಾ ಸಂಚಾಲಕರು, ಮಾಧ್ಯಮ ವಿಭಾಗದವರು ಮೋರ್ಚಾ ಗಳ ಸದಸ್ಯರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಮಹಾಂತೇಶ ಕೌಜಲಗಿ ಚಾಲನೆ



ಬೈಲಹೊಂಗಲ–: ಮತಕ್ಷೇತ್ರದ ವಿವಿಧ ಗ್ರಾಮ ಮತ್ತು ರೈತರ ಹೊಲಗಳಿಗೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳ ಅಭಿವೃದ್ಧಿಗೆ ಸರಕಾರ ಹೆಚ್ಚಿನ ಅನುದಾನ ಒದಗಿಸುತ್ತಿದ್ದು ರಸ್ತೆಗಳ ನಿರ್ಮಾಣ ಕಾರ್ಯದಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡಲಾಗುವುದು ಎಂದು ರಾಜ್ಯ ಹಣಕಾಸು ನಿಮುಗದ ಅಧ್ಯಕ್ಷ ಹಾಗೂ ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.ತೀರ ಹದಗೆಟ್ಟಿದ್ದ ಮಲ್ಲಮ್ಮನ ಬೆಳವಡಿ ಗ್ರಾಮದಿಂದ ದೊಡವಾಡ ಗ್ರಾಮ ಸಂಪರ್ಕಿಸುವ ಗಾಳಿ ಮರಡಿ ಶ್ರೀ ವೀರಭದ್ರೇಶ್ವರ ದೇವಸ್ಥಾನದವರೆಗಿರುವ 4 ಕಿಮೀ ಅಂತರದ ರಸ್ತೆ ನಿರ್ಮಾಣ ಕಾಮಗಾರಿಗೆ ಮಂಗಳವಾರ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಅಂದಾಜು 5 ಕೋಟಿ ರೂ.ವೆಚ್ಚದಲ್ಲಿ ಈ ರಸ್ತೆ ಅಭಿವೃದ್ಧಪಡಿಸಲಾಗುತ್ತಿದೆ.

ಉತ್ತಮ ರಸ್ತೆಗಳು ಜನರ ಮತ್ತು ವಾಹನ ಸವರಾರ ಸುಗಮ ಸಂಚಾರಕ್ಕೆ ಅನುಕೂಲವಾಗುತ್ತವೆ ಎಂದು ಹೇಳಿದರು. ದೊಡವಾಡ ಗ್ರಾಮದ ಅನೇಕ ರೈತರ ಹೊಲಗಳಿಗೆ ಸಂಪರ್ಕಿಸುವ ಹುಣಶಿಮರದ ದಾರಿ, ಬಂಡೆಮ್ಮದೇವಿ ಹೊಲದ ದಾರಿ, ಸುತಗಟ್ಟಿ ಗ್ರಾಮದ ಕಡೆಗಿನ ಕಡಾದ ದಾರಿ ಕೊಪ್ಪದಅಗಸಿಯ ದಲಿತ ಕಾಲೋಣಿ ಸಿಸಿ ರಸ್ತೆ ನಿಮಾಣಕ್ಕೆ ಇದೇ ವೇಳೆ ಭೂಮಿ ಪೂಜೆ ನೆರವೇರಿಸಲಾಯಿತು.

ದೊಡವಾಡ ಹಿರೇಮಠದ ಶ್ರೀ ಜಡಿಸಿದ್ದೇಶ್ವರ ಸ್ವಾಮಿಜಿ ಸಾನಿಧ್ಯ ವಹಿಸಿದ್ದರು. ಪ್ರಮುಖರಾದ ಸಂಕಪ್ಪ ಕೊರಕೊಪ್ಪ, ಶಿವಶಂಕರ ಅರಳಿಮರದ, ಮಲ್ಲಪ್ಪ ಯರಿಕಿತ್ತೂರ, ಮಹಾಂತೇಶ ದಾಭಿಮಠ, ಮಡಿವಾಳಿ ಕರಿಗಾರ, ಮಹಾಂತೇಶ ಉಪ್ಪಿನ, ವಿಠ್ಠಲ ಕಾಳಿ, ಬಸವರಾಜ ಅಂದಾನಶೆಟ್ಟಿ, ಮಂಜುನಾಥ ವಾಳಿ, ರಮೇಶ ಸಪ್ಪಡ್ಲಿ, ವಿಜಯ ಅಲಸಂಧಿ ಹಾಗೂ ಪಿಡಬ್ಲೂಡಿ ಇಂಜನೀಯರಗಳಾದ ಬಸವರಾಜ ಹಾಲಗಿ, ಅನೀಲ್ ಕುಲಕರ್ಣಿ ಗುತ್ತಿಗೆದಾರ ಬಿ.ಎಲ್.ಕುಲಕರ್ಣಿ ಸೇರಿದಂತೆ ಕಾಂಗ್ರೇಸ್ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವರದಿ:ಈಶ್ವರ ಶಿಲ್ಲೇದಾರ.

# ಕಾಲು ಜಾರಿ ಬಿದ್ದ ಪತ್ನಿಯನ್ನು ಬದುಕಿಸಲು ಹೊದ ಪತಿಯೂ ಸಾವು



ಯಮಕನಮರಡಿ:–ಉಳ್ಳಾಗಡ್ಡಿ–ಖಾನಾಪೂರ ಗ್ರಾಮದಲ್ಲಿ ಸೂತಕದ ಛಾಯೇ ಆವರಿಸಿ ಗ್ರಾಮವೇ ದು:ಖದ ಮಡುವಿನಲ್ಲಿ ಮುಳಗಿತ್ತು ಕಾರಣ ಗ್ರಾಮದ ಹೊರವಲಯದಲ್ಲಿರುವ ಮಂಜನ್ನವರ ಮನೆಯ ಸಮೀಪವಿರುವ ಬಾವಿಯೊಂದಕ್ಕೆ ಪತ್ನಿ ನೀರು ತರಲುಹೋಗಿ ಕಾಲು ಜಾರಿ ಬಿದ್ದಿದ್ದನ್ನು ಕಂಡು ಪತಿಯೋರ್ವ ಪತ್ನಿಯನ್ನು ಬದುಕಿಸಲು ಹೋಗಿ ಪತಿ–ಪತ್ನಿಯೂ ಬಾವಿಯಲ್ಲಿ ಬಿದ್ದು ಸಾವನ್ನಪ್ಪಿದ ಘಟನೆ ಸೋಮವಾರ ದಿ,11 ರಂದು ಸಂಜೆ ಹೊತ್ತಿಗೆ ನಡೆದಿದೆ,
ಗ್ರಾಮದೇವಿ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಲ್ಲೇಶ ಧನಪಾಲ ಮಂಜನ್ನವರ [35] ಹಾಗೂ ಪತ್ನಿ ಶ್ರೀಮತಿ ತೇಜಶ್ವಿನಿ ಮಲ್ಲೇಶ ಮಂಜನ್ನವರ [30] ಸಾ॥ಉಳ್ಳಾಗಡ್ಡಿ–ಖಾನಾಪೂರ ಮೃತ ದುರ್ದೈವಿಗಳು ಎನ್ನಲಾಗಿದೆ,
ಮನೆಯ ಸಮೀಪವಿರುವ ಬಾವಿಗೆ ನೀರು ತರಲೆಂದು ಹೋದ ಪತ್ನಿಯ ಕಾಲುಜಾರಿದ ಕ್ಷಣವೇ ಅಲ್ಲೆ ಇದ್ದ ಪತಿ ಅವಳನ್ನು ಬದುಕಿಸಲು ಹೋಗಿದ್ದ ಗಾಬರಿಗೊಂಡ ಪತ್ನಿ ಗಂಡನನ್ನು ಬಿಗಿದಪ್ಪಿದ್ದರಿಂದ ಆತನು ನೀರಲ್ಲಿ ಮುಳುಗಿರಬಹುದೆನ್ನಲಾಗಿದೆ ನಂತರ ಅಗ್ನಿ ಶ್ಯಾಮಕ ದಳದವರು ಬಂದು ಮೃತ ದೇಹಗಳನ್ನು ಹೊರತೆಗೆದಿದ್ದು ಈ ಘಟನಾ ಸ್ಥಳಕ್ಕೆ ಯಮಕನಮರಡಿ ಪೋಲಿಸರು ಭೆಟ್ಟಿ ನೀಡಿದ್ದಾರೆ, ಪ್ರಕರಣ ದಾಖಲಿಸಿಕೊಂಡಿದ್ದಾರೆ, ಈ ಇಬ್ಬರಿಗೂ ಆರಿಯನ್ [8] ವರ್ಷ ಹಾಗೂ ಆರಾಧನಾ [6] ವರ್ಷದ ಮಕ್ಕಳಿದ್ದಾರೆ, ಎನ್ನಲಾಗಿದೆ,

# ಸಂತೋಷ ಪಾರ್ಶಿ ಮತ್ತು ಸಲೀಮ ನದಾಫ್‌ಗೆ ಸತ್ಕಾರ



ಮೂಡಲಗಿ: ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯವರು ಉತ್ತರಪ್ರದೇಶದ ಲಕ್ನೋದಲ್ಲಿ ಜರುಗಿದ 45ನೇ ರಾಷ್ಟ್ರಮಟ್ಟದ ದೇಹದಾ ರ್ಢ್ಯ ಸ್ಪರ್ಧೆಯಲ್ಲಿ ಸುವರ್ಣ ಪದಕ ಪಡೆದ ಮೂಡಲಗಿ ಹೆಸ್ಕಾಂ ನೌಕರ ಸಲೀಮ ಇಸಾಕಹ್ಮದ ನದಾಫ್ ಅವರನ್ನು ಮತ್ತು ರಾಮ ದುರ್ಗ ತಾಲೂಕಿನ ಚಂದರಗಿ ಕ್ರೀಡಾ ವಸತಿ ಶಾಲೆಯ ಚುನಾವಣೆಯಲ್ಲಿ ಎರಡನೇ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾದ ಮೂಡಲಗಿಯ ಆರ್.ಡಿ.ಶಿಕ್ಷಣ ಸಂಸ್ಥೆ ಅಧ್ಯಕ್ಷ ಹಾಗೂ ಮಹಾಲಕ್ಷ್ಮೀ ಅರ್ಬನ್ ಸೊಸಾಯಿಟಿಯ ನಿರ್ದೇಶಕ ಸಂತೋಷ ತಮ್ಮಣ್ಣ ಪಾರ್ಶಿ ಅವರನ್ನು ಮೂಡಲಗಿ ಕಾಶೀಮಅಲಿ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸಾಯಿಟಿಯ ಮತ್ತು ಕರ್ನಾಟಕ ರಾಜ್ಯ ನದಾಫ್(ಪಿಂಜಾರ) ಸಂಘದ ಪದಾಧಿಕಾರಿಗಳು ಸೊಸಾಯಿಟಿ ಸಭಾಭವನದಲ್ಲಿ ಸತ್ಕರಿಸಿ ಗೌರವಿಸಿದರು.

ಸತ್ಕಾರ ಸಮಾರಂಭದಲ್ಲಿ ಕಾಶೀಮಲಿ ಅರ್ಬನ್ ಸೊಸಾಯಿಟಿಯ ಮತ್ತು ಕರ್ನಾಟಕ ರಾಜ್ಯ ನದಾಫ್ ಸಂಘದ ಅಧ್ಯಕ್ಷ ಅನ್ವರ ನದಾಫ್ ಮಾತನಾಡಿ, ಸಂತೋಷ ಪಾರ್ಶಿ ಮತ್ತು ಸಲೀಮ್ ನದಾಫ್ ಅವರು ಮೂಡಲಗಿ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂದು ಶುಭಹಾರೈಸಿದರು.

ಈ ಸಮಯದಲ್ಲಿ ಸೊಸೈಟಿಯ ಉಪಾಧ್ಯಕ್ಷ ಇಸಾಕಅಹ್ಮದ ನದಾಪ್, ನಿರ್ದೇಶಕರಾದ ಮೀರಾಸಾಬ ನದಾಫ್, ಮಲೀಕಜಾನ ನದಾಫ್, ಅಪ್ಪಾಸಾಬ ನದಾಫ್, ಮುಬಾರಕ ಪಿಂಜಾರ, ಮೀರಾಸಾಬ ಸಿ.ನದಾಫ್, ನೂರಸಾಬ ನದಾಫ್, ಪ್ರಧಾನ ಕಾರ್ಯದರ್ಶಿ ಮಹ್ಮದಿರ್ಫಾನ ನದಾಫ್ ಮತ್ತು ಕರ್ನಾಟಕ ರಾಜ್ಯ ನದಾಫ್(ಪಿಂಜಾರ) ಸಂಘ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಮಾ. 14ರಂದು ನಾಲತ್ತವಾಡ ವೀರೇಶ್ವರ ಶರಣರ ಜಯಂತ್ಯುತ್ಸವ ಹಾಗೂ ರಥೋತ್ಸವ

ಗದಗ–: ತಾಲೂಕಿನ ನರಸಾಪೂರ ಗ್ರಾಮದ ನಾಲತ್ತವಾಡ ವೀರೇಶ್ವರ ಶರಣರ ಮಠದಲ್ಲಿ ವೀರೇಶ್ವರ ಶರಣರ ಜಯಂತ್ಯುತ್ಸವ ಹಾಗೂ ರಥೋತ್ಸವ ಕಾರ್ಯಕ್ರಮ ಮಾ. 14ರಂದು ನಡೆಯಲಿವೆ ಎಂದು ಶ್ರೀಮಠದ ಶಿವಕುಮಾರ ಶರಣರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಮಾ. 14ರಂದು ಬೆಳಿಗ್ಗೆ 8ಕ್ಕೆ ಷಟಸ್ಥಲ ಧ್ವಜಾರೋಹಣ, ವೀರೇಶ್ವರ ಶರಣರ ಹಾಗೂ ಚಂದ್ರಶೇಖರ ಶರಣರ ಮೂರ್ತಿಗಳಿಗೆ ಮಹಾರುದ್ರಾಭಿಷೇಕ ನಂತರ ಚಂದ್ರಶೇಖರ ಶರಣರ ಪುಣ್ಯಸ್ಮರಣೋತ್ಸವ ಜರುಗಲಿದೆ.

ಮಧ್ಯಾಹ್ನ 12ಕ್ಕೆ ಧರ್ಮಸಭೆ ನಡೆಯಲಿದ್ದು, ಅಳವಂಡಿಯ ಸಿದ್ದೇಶ್ವರ ಸಂಸ್ಥಾನ ಕಟ್ಟಿಮನಿ ಹಿರೇಮಠದ ಮರುಳಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮಧ್ಯಾಹ್ನ 2ಕ್ಕೆ ಮಹಾಪ್ರಸಾದ, ಸಂಜೆ 5ಕ್ಕೆ ಮಹಾರಥೋತ್ಸವ ನೆರವೇರಲಿದೆ ಎಂದು ಶಿವಕುಮಾರ ಶರಣರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಮಾ.17 ತಾಲೂಕಾ ಮಟ್ಟದ ಮಹಿಳಾ ಕವಿಗೋಷ್ಠಿ

ಮೂಡಲಗಿ: ಕನ್ನಡ ಸಾಹಿತ್ಯ ಪರಿಷತ್ತು ಮೂಡಲಗಿ ತಾಲೂಕಾ ಘಟಕ ಸಹಯೋಗದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಮಾ.17ರಂದು ಮುಂಜಾನೆ 10ಗಂಟೆಗೆ ಮೂಡಲಗಿಯ ಶ್ರೀ ರಂಗ ಸಾಂಸ್ಕೃತಿಕ ಭವನದಲ್ಲಿ ತಾಲೂಕಾ ಮಟ್ಟದ ಮಹಿಳಾ ಕವಿಗೋಷ್ಠಿ, ವಚನಗಾಯನ ಹಾಗೂ ಭಾವಗೀತೆಗಳ ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ವಯಸ್ಸಿನ ನಿರ್ಭಂಧವಿರುವುದಿಲ್ಲ ಎಂದು ಕಸಾಪ ಅಧ್ಯಕ್ಷ ಡಾ.ಸಂಜಯ ಶಿಂಧಿಹಟ್ಟಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿಗೆ ಮೊ.ನಂ.9916246376 ಸಂಪರ್ಕಿಸಲ್ಲು ಕೋರಲಾಗಿದೆ.

# 'ವಿಡಿಯೋ ಮತ್ತು ಫೋಟೋ ಎಡಿಟಿಂಗ್' ತರಬೇತಿ ಕಾರ್ಯಾಗಾರ



ವಿಜಯಪುರ: ಮಹಾತ್ಮಾ ಗಾಂಧಿ ನರೇಗಾ ಯೋಜನೆ ಅತ್ಯಂತ ಪ್ರಾಮುಖ್ಯತೆ ಪಡೆದ ಯೋಜನೆ ಯಾಗಿದ್ದು, ಈ ಯೋಜನೆಯಡಿ ಕೆಲಸ ಮಾಡುತ್ತಿರುವ ಐಇಸಿ ಸಂಯೋಜಕರು ವಿಡಿಯೋ ಹಾಗೂ ಛಾಯಾಗ್ರಹಣ ಕೌಶಲ್ಯ ವನ್ನು ಅಳವಡಿಸಿಕೊಂಡು ಪರಿಣಾ ಮಕಾರಿಯಾಗಿ ಕಾರ್ಯನಿ ರ್ವಹಿಸಬೇಕು ಎಂದು ವಿಜಯ ಪುರ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಿ.ಎಸ್. ಮೂಗನೂರಮಠ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ವಿಜಯಪುರ ಜಿಲ್ಲಾ ಪಂಚಾಯತ್ ಇವರ ಸಹಯೋಗದಲ್ಲಿ ಆಯೋಜಿಸಿದ್ದ ಮಹಾತ್ಮಾಗಾಂಧಿ ನರೇಗಾ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್ ಐಇಸಿ ಸಂಯೋಜಕರಿಗೆ 'ವಿಡಿಯೋ ಮತ್ತು ಫೋಟೋ ಎಡಿಟಿಂಗ್' ತರಬೇತಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹೆಣ್ಣು ಮಕ್ಕಳಿಗೆ ನರೇಗಾ ಯೋಜನೆಯ ಸಂಪೂರ್ಣ ಮಾಹಿತಿ ಒದಗಿಸಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು ಎಂದು ಅವರು ಸಲಹೆ ಮಾಡಿದರು. ಗೋಮಾಳದಲ್ಲಿ ಹಣ್ಣಿನ ಗಿಡ ನೆಡುವುದು, ಚೆಕ್‌ಡ್ಯಾಮುಗಳ ನಿರ್ಮಾಣ, ನೀರಿನ ಸಂರಕ್ಷಣೆ ಇವುಗಳನ್ನೆಲ್ಲ ಸಮುದಾಯಕ್ಕಾಗಿ ಮಾಡುತ್ತಿದ್ದೇವೆಯೇ ಹೊರತು ಯಾವುದೇ ಪಂಚಾಯತಿಯ ಅಧ್ಯಕ್ಷರಿಗಾಗಿ ಅಲ್ಲ. ನರೇಗಾ ಯೋಜನೆಯಲ್ಲಿ ಮಾಡಿದ ಕಾರ್ಯವನ್ನು ಸರಿಯಾಗಿ ಸಂಯೋಜನೆ ಮಾಡಿ ತೋರಿಸಲಾಗುತ್ತಿಲ್ಲಾ. ಈ ವಿಷಯದಲ್ಲಿ ಉತ್ತರ ಕರ್ನಾಟಕದವರು ತುಂಬಾ ಹಿಂದುಳಿದಿರುವುದು ನಮ್ಮೆಲ್ಲರ ದೊಡ್ಡ ದೌರ್ಭಾಗ್ಯ. ಹೀಗಾಗಿ ಇನ್ನು ಮುಂದಾದರು ಈ ಕಾರ್ಯಾಗಾರದಿಂದ ವಿಡಿಯೋಗ್ರಾಫಿ ಹಾಗೂ ಛಾಯಾಗ್ರಹಣ ಕೌಶಲ್ಯ ಕಲಿತು ಪರಿಣಾಮಕಾರಿಯಾಗಿ ಕೆಲಸ ಮಾಡಿ. ಮಾಡಿದ ಕೆಲಸ ಜನರನ್ನು ತಲುಪಬೇಕು ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಿಳಾ ವಿವಿಯ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ, ನಾವು ಯಾವುದೇ ಕೆಲಸ ಮಾಡಬೇಕೆಂದರೆ ನಮಗೆ ವಿವಿಧ ಕೌಶಲ್ಯಗಳ ಅಗತ್ಯತೆ ಇರುತ್ತದೆ. ಸ್ವ–ಕೌಶಲ್ಯಗಳ ಅನಿವಾರ್ಯತೆ ಇರುತ್ತದೆ. ನಮ್ಮ ಕೆಲಸಕ್ಕೆ ಸಂಬಂಧಿಸಿದಂತೆ ನಾವು ಸಂವಹನ, ಸಾಮಾಜಿಕ ಸಂವಹನ, ಸಮಸ್ಯೆ ನಿರ್ವಹಣೆ ಕೌಶಲ್ಯ ಹೀಗೆ ಹಲವಾರು ಕೌಶಲ್ಯಗಳನ್ನು ನಮ್ಮಲ್ಲಿ ಅಳವಡಿಸಿಕೊಂಡಾಗ ಮಾತ್ರ ನಾವು ನಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯ ಎಂದರು.

ಐಇಸಿ ಸಂಯೋಕರಾಗಿ ಕಾರ್ಯನಿರ್ವಹಿಸುತ್ತಿರುವಾಗ ಸಹ ಸಾಮಾಜಿಕ ಕೌಶಲ್ಯ, ಸಂವಹನ ಕೌಶಲ್ಯಗಳ ಅಗತ್ಯತೆ ಇದೆ. ಅದರಂತೆ ಫೋಟೊ ಮತ್ತು ವಿಡಿಯೋಗಳನ್ನು ಸಲ್ಲಿಸಬೇಕಾದ ಅನಿವಾರ್ಯತೆ ಇದ್ದಾಗ ಅವುಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ನೀವು ಚಿತ್ರೀಕರಿಸಿ ವರದಿ ಮಾಡಬೇಕು. ಅಂದಾಗ ಮಾತ್ರ ಅವುಗಳ ಪ್ರಯೋಜನೆ ಆಗುತ್ತದೆ. ಇಂದಿನ ದಿನಮಾನದಲ್ಲಿ ತಂತ್ರಜ್ಞಾನ ಅತೀ ಹೆಚ್ಚಾಗಿ ಬೆಳೆದಿದ್ದು ಅವುಗಳನ್ನು ಬಳಸಿಕೊಂಡು ನೀವು ನಿಮ್ಮ ತಂತ್ರಗಾರಿಕೆ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಈ ಕಾರ್ಯಾಗಾರ ನಿಮಗೆ ಸಹಕಾರಿಯಾಗಲಿದೆ ಎಂದರು. ನರೇಗಾ ಯೋಜನೆಯಡಿ ಐಇಸಿ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ನಿಮ್ಮ ಮೇಲೆ ಅತೀ ಹೆಚ್ಚಿನ ಜವಾಬ್ದಾರಿಗಳಿರುತ್ತವೆ. ಗ್ರಾಮೀಣಾಭಿವೃದ್ಧಿಯ ಮಹತ್ವಕಾಂಕ್ಷೆಯ ಯೋಜನೆಯನ್ನು ಈಡೇರಿಸುವಲ್ಲಿ ನಿಮ್ಮ ಪಾತ್ರ ಬಹಳ ಪ್ರಮುಖವಾಗಿದೆ. ಫಲಾನುಭವಿ ಮತ್ತು ಸರಕಾರದ ನಡುವೆ ನೀವು ಕೊಂಡಿಯಂತೆ ಕಾರ್ಯನಿರ್ವಹಿಸುತ್ತೀರಿ, ಹೀಗಾಗಿ ಈ ಯೋಜನೆಯ ಅನುಷ್ಠಾನದ ಯಶಸ್ವಿಗೆ ನಿಮ್ಮ ಕೊಡುಗೆ ಸಲ್ಲುತ್ತದೆ ಎಂದು ಆಶಿಸುತ್ತೇನೆ ಎಂದರು.

ಉದ್ಯೋಗ ಖಾತ್ರಿ ಯೋಜನೆ ಸರಕಾರದ ಬಹಳ ಪ್ರಾಮುಖ್ಯತೆ ಪಡೆದಿರುವಂತ ಯೋಜನೆ. ಇದಕ್ಕಾಗಿಯೇ ಸರಕಾರ ಸಾಕಷ್ಟು ಹಣವನ್ನು ಮೀಸಲಿಟ್ಟು ಈ ಮೂಲಕ ಸುಸ್ಥಿರವಾದ ಗ್ರಾಮೀಣಾಭಿವೃದ್ಧಿ ಆಗಬೇಕು ಎನ್ನುವುದು ಈ ಯೋಜನೆ ಉದ್ದೇಶ. ಅದರಂತೆ ಈ ತರಹದ ಯೋಜನೆಗಳಲ್ಲಿ ಮಹಿಳೆಯರು ಸಹ ಭಾಗಿಯಾಗಬೇಕು. ಅವರಿಗೂ ಸಹ ಇದರ ಕುರಿತು ಅರಿವನ್ನು ಮೂಡಿಸಬೇಕಿದೆ. ಈ ಕಾರ್ಯಾಗಾರ ನಿಮಗೆಲ್ಲ ಒಂದು ಹೊಸ ಕೌಶಲ್ಯ ಮತ್ತು ಸಾಮರ್ಥ್ಯವನ್ನು ನೀಡುತ್ತದೆ ಎಂದು ನಾನು ಭಾವಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ತುಮಕೂರಿನ ಶ್ರೀ.ಸಿದ್ದಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಬಿ.ಟಿ.ಮುದ್ದೇಶ್, ವಿಜಯಪುರ ಜಿಲ್ಲೆಯ ವಿವಿಧ ತಾಲೂಕುಗಳ ಐಇಸಿ ಸಂಯೋಜಕರು ಹಾಗೂ ಸಂಶೋಧನಾ ವಿದ್ಯಾರ್ಥಿನಿಯರು, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಶೋಧನಾ ವಿದ್ಯಾರ್ಥಿನಿ ದೀಪಾ ತಟ್ಟಿಮನಿ ಸ್ವಾಗತಿಸಿದರು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ. ಓಂಕಾರ ಕಾಕಡೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಶೋಧನಾ ವಿದ್ಯಾರ್ಥಿನಿಯರಾದ ಫಿಲೋಮಿನಾ ವಂದಿಸಿದರು. ಸುಷ್ಮಾ ಪವಾರ ನಿರೂಪಿಸಿದರು.